‘ಹಿಂದೂ ಭಕ್ತಗಣ’ವು ಗಾಂಧಿ ಭಾವಚಿತ್ರಕ್ಕೆ ಹುಸಿ ಗುಂಡು ಹಾರಿಸಿ ಸಂಭ್ರಮಿಸಿತು. ಗೋಡ್ಸೆಗೆ ಜೈಕಾರ ಕೂಗಿತು.



12–8–2018ರಂದು ಅಂಬೇಡ್ಕರ್‌ಗೆ ಧಿಕ್ಕಾರವನ್ನೂ 30–1–2019ರಂದು ಗೋಡ್ಸೆಗೆ ಜೈಕಾರವನ್ನೂ ಕೂಗಿದ ತಂಡಗಳ ವಿಕೃತಿ ಒಂದೇ ಆಗಿದೆ. ಈ ಎರಡೂ ಘಟನೆಗಳನ್ನು ಒಂದಾಗಿ ನೋಡುವುದು ಮುಖ್ಯವಾಗಿದೆ. ಆದರೆ, ನಮ್ಮ ಸಂದರ್ಭ ಹೇಗೆ ಬೆಳೆದು ಬಂದಿದೆಯೆಂದರೆ, ಗಾಂಧೀಜಿಯವರನ್ನು ಸಂಘ ಪರಿವಾರವಾದಿಗಳು ಮತ್ತು ಕೆಲವು ಅಂಬೇಡ್ಕರ್‌ವಾದಿಗಳು ವಿರೋಧಿಸುತ್ತಾರೆ. ವಿರೋಧದ ಕಾರಣಗಳು ವಿಭಿನ್ನವಾಗಿದ್ದರೂ ಈ ಎರಡೂ ಪಡೆಗಳಿಗೆ ಗಾಂಧೀಜಿ ಅಪಥ್ಯ. ಸಂಘ ಪರಿವಾರದ ‘ಹುಸಿ ಸಂಸ್ಕೃತಿ ಪ್ರತಿಪಾದಕರಿಗೆ’ ಗಾಂಧೀಜಿಯವರು ಮುಸ್ಲಿಂಪರ ಎಂಬ ವಿಷಯಕ್ಕೆ ವಿರೋಧ. ಅಂಬೇಡ್ಕರ್‌ವಾದಿ ಕೆಲ ದಲಿತರಿಗೆ ಪೂನಾ ಒಪ್ಪಂದದ ವಿಷಯದಲ್ಲಿ ಗಾಂಧೀಜಿ, ಅಂಬೇಡ್ಕರ್ ವಿಚಾರಧಾರೆಗೆ ಪೂರ್ಣಸಮ್ಮತಿ ಕೊಡಲಿಲ್ಲ ಎಂಬ ವಿರೋಧ, ಈ ಎರಡೂ ವಲಯದವರಲ್ಲದ ಕೆಲವು ಪ್ರಗತಿಪರರಿಗೆ ಗಾಂಧೀಜಿ ಜಾತಿ ಮತ್ತು ವರ್ಣಾಶ್ರಮ ಪರವಾದ ಪ್ರತಿಪಾದಕರೆಂಬ ತಿಳಿವಳಿಕೆಯಿಂದ ವಿರೋಧ.

ಆದರೆ, ಈ ವಿರೋಧಗಳಲ್ಲಿ ಪೂನಾ ಒಪ್ಪಂದದ ವಿಷಯದಲ್ಲಿ ‘ಆಂಶಿಕ ಸತ್ಯ’ ಇರುವುದನ್ನು ಬಿಟ್ಟರೆ, ಉಳಿದದ್ದೆಲ್ಲವೂ ಅರ್ಧಬರ್ಧ ಓದು ಮತ್ತು ಪೂರ್ವಗ್ರಹದಿಂದ ಮೂಡಿವೆ. ನಿರ್ದಿಷ್ಟ ಸಂದರ್ಭದಲ್ಲಿ ಗಾಂಧೀಜಿಯವರು ಮುಸ್ಲಿಮರ ಪರವಾಗಿ ನಿಂತದ್ದು ಒಂದು ಚಾರಿತ್ರಿಕ ಅನಿವಾರ್ಯ ಎಂಬುದನ್ನು ಅರ್ಥಮಾಡಿಕೊಳ್ಳದ ‘ಗೋಡ್ಸೆವಾದಿ’ಗಳಿಗೆ ಇಂದು ಎಂದಿಲ್ಲದ ಬಲ ಬಂದಿರುವುದನ್ನು ಕೆಲವು ಅಂಬೇಡ್ಕರ್‌ವಾದಿಗಳು ಮತ್ತು ಪ್ರಗತಿಪರರು ಆತಂಕದಿಂದ ಅರಿತುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಧಾರ್ಮಿಕ ಮೂಲಭೂತವಾದಿಗಳು ಹಾಗೂ ಮನುವಾದಿಗಳಿಗೆ ಪರೋಕ್ಷ ಕುಮ್ಮಕ್ಕು ಕೊಟ್ಟಂತಾಗುತ್ತದೆ. ಹೀಗೆ ಹೇಳಿದಾಗ, ಗಾಂಧೀಜಿಯವರು ಜಾತಿ–ವರ್ಣವ್ಯವಸ್ಥೆಯ ಪರವಾಗಿದ್ದದ್ದು ಮನುವಾದವಲ್ಲವೆ ಎಂದು ಪ್ರಶ್ನಿಸಲು ಸಾಧ್ಯ. ತಾತ್ವಿಕ ತೊಡಕು ಇರುವುದೇ ಇಲ್ಲಿ. ಹಿಂದೂಧರ್ಮದೊಳಗಿಂದ ವಿಚಾರ ಮಾಡುವ ಗಾಂಧೀಜಿಯವರಿಗೂ ಹಿಂದೂಧರ್ಮದ ಹೊರಗಿನಿಂದ ವಿಚಾರ ಮಾಡುವ ಅಂಬೇಡ್ಕರ್ ಅವರಿಗೂ ಅಂತರವಿರುವುದು ಈ ಒಳ ಮತ್ತು ಹೊರ ಸ್ಥಾನ ನಿರ್ದೇಶಿತ ವಿಚಾರಧಾರೆಯಲ್ಲಿ ಎಂದು ನನಗನ್ನಿಸುತ್ತದೆ. ಮುಸ್ಲಿಮರು ಹಿಂದೂ ಅಲ್ಲದಿರುವುದು, ದಲಿತರು ಹಿಂದೂಗಳೆಂದು ಪರಿಗಣಿಸಿದ್ದು ಗಾಂಧೀಜಿಯವರ ಸಾಮಾಜಿಕ ವಿಚಾರಧಾರೆಯ ಇತಿಮಿತಿಗಳಿಗೆ ಕಾರಣವಾಗಿದೆ. ಆದರೆ ಗಾಂಧೀಜಿ ತಮ್ಮ ವಿಚಾರಧಾರೆಯ ಪ್ರತಿಪಾದನೆಯಲ್ಲಿ ಅಪ್ರಾಮಾಣಿಕರಾಗಿರಲಿಲ್ಲ. ಅವರು ‘ತಪ್ಪು’ಗಳನ್ನು ಪ್ರತಿಪಾದಿಸಿರಬಹುದು, ಸುಳ್ಳುಗಳನ್ನು ಪ್ರಚಾರ ಮಾಡಲಿಲ್ಲ. ಈ ಹಿನ್ನೆಲೆಯಲ್ಲಿ ಗಾಂಧೀಜಿಯವರು 1915ರ ಜನವರಿ 9ರಂದು ಆಡಿದ ಮಾತುಗಳನ್ನು ಗಮನಿಸಬೇಕು. ಅದು ದಕ್ಷಿಣ ಆಫ್ರಿಕಾದಿಂದ ಗಾಂಧೀಜಿ ನಮ್ಮ ನೆಲಕ್ಕೆ ಹಿಂತಿರುಗಿದ ದಿನ. ಅದಾಗಲೇ ಆಫ್ರಿಕಾದಲ್ಲಿ ಹೋರಾಟಗಳ ಕೇಂದ್ರವಾಗಿದ್ದ ಗಾಂಧೀಜಿಯನ್ನು ಗೋಪಾಲಕೃಷ್ಣ ಗೋಖಲೆಯವರಾದಿಯಾಗಿ ಅನೇಕ ಮುಂದಾಳುಗಳು ಅಂದಿನ ಬೊಂಬಾಯಿಯ ಅಪೊಲೋ ಬಂದರಿನಲ್ಲಿ ಸ್ವಾಗತಿಸಿದರು. ಸ್ವಾಗತ ಸಮಾರಂಭದಲ್ಲಿ ಗಾಂಧೀಜಿ ಹೀಗೆ ಹೇಳಿದರು: ‘ನೀವೆಲ್ಲ ನನ್ನ ಗೆಲುವನ್ನಷ್ಟೇ ಗಮನಿಸಿದ್ದೀರಿ. ನನ್ನ ಸೋಲುಗಳನ್ನು ಗಮನಿಸಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ನನ್ನ ಕ್ರಿಯೆಯ ಜಯದ ಹಾದಿಯನ್ನು ಕೇಳಿ ಅಭಿನಂದಿಸುತ್ತಿರುವ ನಿಮ್ಮೆದುರು ನನ್ನ ಸೋಲುಗಳು ಬೆತ್ತಲೆಯಾಗಿ ನಿಲ್ಲುತ್ತವೆ, ನನ್ನ ತಪ್ಪುಗಳೂ ಸಾಕಷ್ಟಿವೆ, ನನ್ನ ಸೋಲು ಮತ್ತು ತಪ್ಪುಗಳನ್ನು ಮತ್ತೆ ನಿರೀಕ್ಷಿಸುತ್ತಲೇ ಅವನ್ನು ಮೀರಿ ತಾಯ್ನಾಡಿನ ಸೇವೆ ಮಾಡಲು ಸಿದ್ಧನಿದ್ದೇನೆ.’

ಗಾಂಧೀಜಿಯವರಿಗೆ ತಾವು ‘ತಪ್ಪು’ ಮಾಡಬಹುದೆಂಬ ಎಚ್ಚರವಿದ್ದದ್ದರಿಂದಲೇ ತಿದ್ದಿಕೊಳ್ಳುವ